**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆ: 2792/2023**

**ಸಿ.ಡಬ್ಲೂ: 3 /ಪಿ.ಡಬ್ಲೂ: 2**

**ಪ್ರಮಾಣೀಕರಿಸಿದ ದಿನಾಂಕ: 10.07.2024**

| | |
|---|---|
| ಹೆಸರು | ಅರುಣಕುಮಾರ್ |
| ತಂದೆಯ ಹೆಸರು | ನಿಧಿಅರಸನ್ |
| ವಯಸ್ಸು | 30 ವರ್ಷ |
| ವೃತ್ತಿ | ಶಿಕ್ಷಕ |
| ವಾಸ | ಹೆನ್ರೀಸ್ ಎ.ಎಂ.ಲೈನ್ |

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ:-**

ಚಾಸಾ1, 2 ಮತ್ತು 4 ರಿಂದ 6 ಗೊತ್ತು. 1, 2 ಮತ್ತು 4ನೇ ಆರೋಪಿತರು ಸಹ ಗೊತ್ತು. 3ನೇ ಆರೋಪಿ ಸಹ ಪರಿಚಯ ಇರುತ್ತಾನೆ. ಗೈರು ಹಾಜರಾಗಿರುವ 3ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

2. ದಿ: 6.10.2023 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಚಾಸಾ 1 ರವರು ಹೆನ್ರೀಸ್ ಲೈನ್‌ನ ದೇವಸ್ಥಾನ ಬಳಿ ನಿಂತಿರುವಾಗ ಆರೋಪಿಗಳು ಚಾಸಾ 1 ರವರಿಗೆ ಹಲ್ಲೆ ಮಾಡಿರುತ್ತಾರೆ. 1ನೇ ಆರೋಪಿ ಕೈಯಿಂದ ಚಾಸಾ 1 ರವರ ಬಾಯಿಗೆ ಗುದ್ದಿದಾಗ ಎರಡು ಹಲ್ಲು ಮುರಿದು ಬಿದ್ದು ರಕ್ತ ಬಂದಿರುತ್ತದೆ. ನಂತರ ಚಾಸಾ 1 ರವರ ಅಣ್ಣತಮ್ಮಂದಿರು ಬಂದು ಚಾಸಾ 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ದಿ: 08.10.2023 ರಂದು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಪೋಲಿಸರು ಬಂದು 10.45 ರಿಂದ 11.45 ರವರೆಗೆ ಪಂಚನಾಮೆಯನ್ನು ನನ್ನ, ಚಾಸಾ 1 ಮತ್ತು 2 ರವರ ಸಮಕ್ಷಮ ಮಾಡಿರುತ್ತಾರೆ. ಪೋಲಿಸರು ಪಂಚನಾಮೆಯನ್ನು ಮಾಡುವಾಗ ಚಾಸಾ 1 ರವರು ಕೊಟ್ಟ ಎರಡು ಹಲ್ಲು ಮತ್ತು ರಕ್ತಸ್ರಾವ ಆದ ಟಿ-ಶರ್ಟ್ ಅನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನಿಪಿ 2 ರ ಪಂಚನಾಮೆಯನ್ನು ಮತ್ತು ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ 1 ಮತ್ತು 2 ಅನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು 1, 2 ಮತ್ತು 4 ನೇ ಆರೋಪಿತರನ್ನು ಜೊತೆಗೆ ಗೈರು ಹಾಜರಾಗಿರುವ 3ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. 3ನೇ ಆರೋಪಿಯನ್ನು ಗುರುತಿಸಲು ವಕೀಲರ ತಕರಾರು ಇರುವುದಿಲ್ಲ.

<u>ಪಾಟೀ ಸವಾಲುಃ-ಆರೋಪಿಗಳ ಪರ ಶ್ರೀ ಎಸ್.ಎ.ಹೆಚ್. ವಕೀಲರಿಂದಃ-</u>

3. ಚಾಸಾ 1 ನಮ್ಮ ಏರಿಯಾದವನಾಗಿರುವುದರಿಂದ ಪರಿಚಯ. ಚಾಸಾ 1 ರವರಿಗೂ ಆರೋಪಿಗಳಿಗೂ ದೇವಸ್ಥಾನ ವಿಚಾರವಾಗಿ ಗಲಾಟೆಯಾಗುತ್ತಿರುವ ಬಗ್ಗೆ ಗೊತ್ತಿಲ್ಲ. 3 ನೇ ಆರೋಪಿಯು ಚಾಸಾ 1 ರವರು ದೇವಸ್ಥಾನದಲ್ಲಿ ಸೌಂಡ್ ಸಿಸ್ಟಮ್ ಹಾಕಿಕೊಂಡಿರುವ ಬಗ್ಗೆ ಗಲಾಟೆ ಮಾಡಿದಾಗ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಪೋಲಿಸರು ಶ್ರೀರಾಮ ದೇವಸ್ಥಾನದಲ್ಲಿ ಒಂದು ದಿವಸ ಸೌಂಡ್ ಸಿಸ್ಟಮ್ ಹಾಕಲು ಅನುಮತಿ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಚಾಸಾ 1 ರವರು ಕ್ರಿಶ್ಚಿಯನ್ ಧರ್ಮದವರು ಎಂದರೆ ಸರಿ. ಶ್ರೀರಾಮ ನವಮಿ ದಿನ ಹೆನ್ರೀಸ್ ಲೇನ್ ನಲ್ಲಿ ಎಲ್ಲರೂ ದೇವಸ್ಥಾನ ಬಳಿ ಆಚರಣೆಗಾಗಿ ಬಂದಿರುತ್ತಾರೆ ಎಂದರೆ ಸರಿ. ಶ್ರೀರಾಮ ನವಮಿ ದಿನ ಪೋಲಿಸರು ಬಂದು ಒಂದು ದಿನ ಅನುಮತಿ ಕೊಟ್ಟಿರುವುದರಿಂದ ಯಾರು ಗಲಾಟೆ ಮಾಡಬಾರದು ಎಂದು ಎಲ್ಲರಿಗೂ ಹೇಳಿರುತ್ತಾರೆ ಎಂದರೆ ಗೊತ್ತಿಲ್ಲ. ಚಾಸಾ 1 ಮತ್ತು ಅಣ್ಣತಮ್ಮಂದಿರು ಪ್ರತಿ ವರ್ಷ ವರ್ಷ ಶ್ರೀರಾಮ ನವಮಿ ದಿವಸ ದೇವಸ್ಥಾನದ ಬಳಿ ಗಲಾಟೆ ಮಾಡುತ್ತಾರೆ ಎಂದರೆ ಸರಿಯಲ್ಲ.

4. ನಿಪಿ 2 ರ ಪಂಚನಾಮೆಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ದೇವಸ್ಥಾನ ಬಳಿ ಮಾಡಿರುತ್ತೇನೆ. ಘಟನಾ ಸ್ಥಳದ ಚೆಕ್ಕುಬಂದಿ ಗೊತ್ತಿಲ್ಲ. ನಿಪಿ 2 ರ ಪಂಚನಾಮೆಗೆ ನಾನು ಮತ್ತು ಚಾಸಾ 2 ರವರು ಸಹಿ ಹಾಕಿರುತ್ತೇವೆ. ನಿಪಿ 2 ರ ಪಂಚನಾಮೆಯಲ್ಲಿ ಬರೆದಿರುವ ಕನ್ನಡದ ಅಂಶಗಳು ಗೊತ್ತಿಲ್ಲ. ಮು.ಮಾ 2 ಎರಡು ಹಲ್ಲುಗಳು ದೇವಸ್ಥಾನದ ಹೊರಗಡೆ ಬಿದ್ದಿರುತ್ತದೆ. ಮು.ಮಾ 2 ಎರಡು ಹಲ್ಲುಗಳು ಕಿತ್ತುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮು.ಮಾ 2 ರ ಹಲ್ಲುಗಳನ್ನು ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡಿಲ್ಲ. ಮು.ಮಾ 1 ಮತ್ತು 2 ಅನ್ನು ಪೋಲಿಸರಿಗೆ ಚಾಸಾ 1 ರವರು ದೇವಸ್ಥಾನದ ಮುಂದೆ ಕೊಟ್ಟಿರುತ್ತಾರೆ. ನಾನು ಚಾಸಾ 1 ರವರ ಮಾತು ಕೇಳಿ ಸುಳ್ಳು ಸಾಕಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ರ ಪಂಚನಾಮೆಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.